**ದೋ.ಸಾ. : 5 ಫ್ರಾ.ಸಾ. : 9**

ಸಾಕ್ಷಿಯ ಹೆಸರು : ಆಸಿಫ್ ಅಲಿ ಅಬ್ದುಲ್ ಗಫಾರ್

**ದಿನಾಂಕಃ 10–12–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–**

9. ನಾನು 2021 ನೇ ಇಸವಿಯಲ್ಲಿ ಚಂದ್ರಾವರ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷನಾಗಿದ್ದೆ. ಆ ಸಮಯದಲ್ಲಿ ನಾನು ಬೇರೆಯವರ ಹೆಸರಿನಲ್ಲಿ ಟೆಂಡರ್ ಪಡೆದು, ಗುತ್ತಿಗೆ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ರಸ್ತೆ ಕಾಮಗಾರಿಗಳನ್ನೂ ಸಹ ಮಾಡುತ್ತಿದ್ದೆ. 2021 ನೇ ಇಸವಿಯಲ್ಲಿ ಆರೋಪಿಯ ಮನೆಯ ಮುಂದಿನ ರಸ್ತೆಯನ್ನು ಸಿಮೆಂಟ್ ರಸ್ತೆಯನ್ನಾಗಿ ಮಾಡಲು ಕಾಮಗಾರಿಗೆ ಟೆಂಡರ್ ನೀಡಲಾಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ರಸ್ತೆ ಕಾಮಗಾರಿಗೆ ಟೆಂಡರ್ ಆಗಿದ್ದರೂ ಸಹ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಸ್ತೆ ನಿರ್ಮಾಣ ಕಾರ್ಯಕ್ಕೆ ಟೆಂಡರ್ ಆಗಿದ್ದರಿಂದ, ಗ್ರಾಮ ಪಂಚಾಯತಿಯವರು ಆರೋಪಿಯ ಮನೆಯ ಕಂಪೌಂಡನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಸೂಚಿಸಿದ್ದರು ಎಂದರೆ ಸರಿಯಲ್ಲ. ಕಂಪೌಂಡನ್ನು ಹಿಂದಕ್ಕೆ ಪಡೆಯುವ ವಿಚಾರಕ್ಕೆ ಆರೋಪಿಗೆ ಹಾಗೂ ನನಗೆ ಮಾತಿಗೆ ಮಾತಾಗಿತ್ತು ಎಂದರೆ ಸಾಕ್ಷಿಯು, ಆರೋಪಿ ಮನೆಯಿರುವ ಪ್ರದೇಶವು ನನ್ನ ವಾರ್ಡಿಗೆ ಬರುವುದಿಲ್ಲ ಎಂದು ನುಡಿಯುತ್ತಾರೆ.

10. ಈ ಪ್ರಕರಣದ ಘಟನೆ ನಡೆಯುವ ಪೂರ್ವದಲ್ಲಿ ಆರೋಪಿಯು ಹೊರದೇಶದಲ್ಲಿದ್ದ ಎಂದರೆ ಸರಿ. ಆ ಸಮಯದಲ್ಲಿ ಆರೋಪಿಯ ಮೊದಲನೇ ಹೆಂಡತಿಯು ಮೃತನೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದರು ಎಂದರೆ ಸರಿಯಲ್ಲ. ಚಂದಾವರದ ಜನತಾ ಕಾಲೋನಿಯಲ್ಲಿ ಬಹಳಷ್ಟು ಮುಸ್ಲಿಮರೇ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ಶೇ.50 ರಷ್ಟು ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಎಂ.ಓ.–11 ಮೊಬೈಲಿನಲ್ಲಿ ಈ ಘಟನೆಗೆ ಸಂಬಂಧಿಸಿದಂತೆ ಕಾಣುವ ದೃಶ್ಯಾವಳಿಯಲ್ಲಿ ಯಾವುದೇ ವ್ಯಕ್ತಿ ಮನೆಗೆ ಹೋಗಿ ಚಾಕು ತಂದಿರುವುದು ಕಾಣುವುದಿಲ್ಲ ಎಂದರೆ ಸರಿ. ನಾನು ಯಾವುದೇ ಪಂಚನಾಮೆಗೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ, ಫೋಟೊ ತೆಗೆದಿಲ್ಲ, ನಕಾಶೆ ತಯಾರಿಸಿಲ್ಲ,

ಹಾಗೂ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ